ತಲೆಬರಹವನ್ನು ನೋಡಿದ ತಕ್ಷಣ ಮದುವೆಯಾಗಿರುವವರಿಗೆ ವಿಷಯ ಏನಿರಬಹುದು ಎಂದು ಗೊತ್ತಾಗಿಹೋಗಿರುತ್ತದೆ. ಮದುವೆಯಾಗದೆ ಇರುವವರಿಗೂ ಬರಹದಲ್ಲಿ ಏನಿರಬಹುದು ಎನ್ನುವುದರ ಸುಮಾರಾದ ಅಂದಾಜಿದ್ದರೂ ಇದರ ಬಗೆಗೆ ತಿಳಿಯುವ ಆಸಕ್ತಿ ಇರುತ್ತದೆ. ಎಲ್ಲಾ ವಯಸ್ಕ ಸ್ತ್ರೀ ಪುರುಷರಿಗೂ ಸಮಾನ ಆಸಕ್ತಿಯ ವಿಷಯವಾಗಿದ್ದರೂ ನಾವೆಲ್ಲಾ ಇದರ ಬಗೆಗೆ ಅನಗತ್ಯ ಮಡಿವಂತಿಕೆಯನ್ನು ತೋರಿಸುತ್ತಾ ಬೇಕಾಗಿದ್ದನ್ನು ಪಡೆಯಲಾಗದೆ ಅಸುಖಿಗಳಾಗಿರುತ್ತೇವೆ.

ಈಗ ಗೊತ್ತಾಗಿರಬೇಕಲ್ವಾ ಇದು ಎಂದರೆ ಏನೆಂದು?! ಪತಿ–ಪತ್ನಿಯರ ಲೈಂಗಿಕ ಸಂಬಂಧ ಇಲ್ಲಿನ ವಿಷಯ. ನಮ್ಮ ಮಡಿವಂತ ಸಮಾಜಕ್ಕೆ ಹೊಂದಿಕೆಯಾಗುವಂತೆ ಲೈಂಗಿಕತೆಯ ವಿಚಾರಗಳನ್ನು ಚರ್ಚಿಸುವುದು ಸವಾಲಿನ ಕೆಲಸ. ಶೀರ್ಷಿಕೆಯಲ್ಲಿಯೇ ಲೈಂಗಿಕತೆ, ಕಾಮಸಂಬಂಧ ಎನ್ನುವ ಶಬ್ದಗಳನ್ನು ಬಳಸಿದರೂ ಕಷ್ಟವೇ.

ನಮ್ಮ ಮಡಿವಂತ ಸಮಾಜದ ಮತ್ತು ಸರ್ಕಾರಗಳ ಇಬ್ಬಗೆಯ ನೀತಿಗಳನ್ನು ನೋಡಿ. ಮಾನವನ ಲೈಂಗಿಕತೆಯ ಬಗೆಗೆ ಮುಕ್ತವಾಗಿ ಮಾತನಾಡಲು, ಚರ್ಚಿಸಲು, ಮಕ್ಕಳಿಗೆ ಸೂಕ್ತ ಲೈಂಗಿಕ ಶಿಕ್ಷಣ ಕೊಡಲು ಮುಜುಗರ ಪಟ್ಟುಕೊಳ್ಳುವ ನಾವು ನಕಲಿ ಲೈಂಗಿಕ ಕಾಮವರ್ಧಕಗಳ ಜಾಹೀರಾತುಗಳನ್ನು ಮುಖಪುಟದಲ್ಲಿ ನೋಡುತ್ತೇವೆ. ಲೈಂಗಿಕ ಕ್ರಿಯೆಯನ್ನು ಸೂಚ್ಯವಾಗಿ ಒರಟಾಗಿ ತೋರಿಸುವ ಐಟಂ ಸಾಂಗ್‌ಗಳನ್ನು ವಿರೋಧಿಸುವುದಿಲ್ಲ. ವಿಕೃತ ನೀಲಿಚಿತ್ರಗಳಿಗೆ ನಿಷೇಧವಿದ್ದರೂ ಹಳ್ಳಿಹಳ್ಳಿಗಳಲ್ಲಿ ಹದಿವಯಸ್ಸಿನವರ ಮೊಬೈಲ್‌ಗಳಲ್ಲಿ ಇದು ಹರಿದಾಡುತ್ತಿದೆ. ಶತಶತಮಾನಗಳಿಂದ ಸಾಂಪ್ರದಾಯಿಕ ಸಮಾಜ ಹೂತಿಟ್ಟಿದ್ದ ಮಕ್ಕಳ ಮತ್ತು ಸ್ತ್ರೀಯರ ಮೇಲಿನ ಲೈಂಗಿಕ ಕ್ರೌರ್ಯ ಇತ್ತೀಚೆಗೆ ಹಂತಹಂತವಾಗಿ ಅನಾವರಣಗೊಳ್ಳುತ್ತಿದೆ.

ಅಂದರೆ ಸಮಸ್ಯೆಗಳನ್ನು ಚಾಪೆಯಡಿಗೆ ತೂರಿಸಿ ಎಲ್ಲವೂ ಸರಿಯಾಗಿದೆ ಎನ್ನುವ ಮುಖವಾಡಗಳನ್ನು ಧರಿಸುವ ನಮ್ಮ ಪ್ರಯತ್ನಗಳು ಸಾಮಾಜಿಕವಾಗಿ ಉಪಯುಕ್ತವಲ್ಲ ಎಂದಾಯಿತು. ಹಾಗಾಗಿ ದಾಂಪತ್ಯದಲ್ಲಿನ ಲೈಂಗಿಕತೆಯ ಬಗೆಗೆ ಸ್ವಲ್ಪ ಸುಸಂಸ್ಕೃತವಾಗಿ ಮತ್ತು ಮುಕ್ತವಾಗಿ ಚರ್ಚಿಸಲು ಇಲ್ಲಿ ಪ್ರಯತ್ನಿಸೋಣ.



